

## ಕೀಟದ ಲಾರ್ವಾಗಳು

ತೋಟದಲ್ಲಿನ ಎಲೆಯೊಂದರಲ್ಲಿ ಕ್ಯಾಮರಾಗೆ ದೊರೆತ ಚಿತ್ರವಿದು. ಒಂದು ಕೀಟದ ಲಾರ್ವಾದ ವಿವಿಧ ಹಂತಗಳು ಇಲ್ಲಿವೆ. ಇನ್ನೂ ಬೆಳವಣಿಗೆಯ ಹಂತದಲ್ಲಿರುವುದರಿಂದ ಕೀಟದ ಹೆಸರು ಗೊತ್ತಾಗಲಿಲ್ಲ. ಆದರೆ ಎಲೆಯ ಮೇಲೆ ಎಷ್ಟೊಂದು ಅಂದವಾಗಿ ರಂಗೋಲಿ ಬಿಡಿಸಿದಂತಿದೆ. ರೈತನ ಬೆಳೆಗೆ ಇವು ಕಂಟಕವಾಗಿದ್ದರೂ ನೋಡಿದರೆ ಥಟ್ಟನೆ ಮನಸೆಳೆಯುತ್ತವೆ.

—ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು



## ಬೆದರು ಬೊಂಬೆಗಳು!

ದಿನಾಲೂ ಹೋಗುವಂತೆ ಅದೊಂದು ದಿನ ಬೈಕ್ ಮೇಲೆ ಶಾಲೆಗೆ ಹೋಗುತ್ತಿರುವಾಗ ಬಲಗಡೆ ನನ್ನ ದೃಷ್ಟಿ ಹರಿಯಿತು. ತುಸು ದೂರದಲ್ಲಿ ಕಲ್ಲಂಗಡಿ ಹೊಲದಲ್ಲಿ ಜೋಡಿಯೊಂದು ನಿಂತಿರುವ ದೃಶ್ಯ ಕಂಡಿತು. ನನ್ನಲ್ಲಿ ಕುತೂಹಲ ಉಂಟಾಗಿ, ಬೈಕ್ ನಿಧಾನಗೊಳಿಸಿ ನೋಡಿದೆ. ಮಾಸಿದ ದೋತರ, ಬಿಳಿ ಅಂಗಿ, ರೇಶಿಮೆಯ ರುಮಾಲು, ಕೈಯಲ್ಲಿ ಕೋಲು ಹಿಡಿದ ಅಜ್ಜ. ಮೈತುಂಬ ಸೀರೆ ತೊಟ್ಟು, ತಲೆಯ ಮೇಲೆ ಬುತ್ತಿ ಗಂಟು ಹೊತ್ತ ಅಜ್ಜಿ. ಇಬ್ಬರೂ ಸ್ವಲ್ಪವೂ ಅಲುಗಾಡದೆ ನಿಂತಿರುವ ಭಾವ– ಭಂಗಿ ಅಚ್ಚರಿ ಮೂಡಿಸುವಂತಿತ್ತು.

ಅವರಿಬ್ಬರ ಮುಖ ಮರೆಯಾಗಿತ್ತು. ‘ಅಬ್ಬಾ! ಎಷ್ಟೊಂದು ಕಲಾತ್ಮಕವಾಗಿವೆ ಈ ಬೆದರು ಬೊಂಬೆಗಳು’ ಎಂಬಂತಿದ್ದವು. ಪ್ರಾಣಿ ಪಕ್ಷಿಗಳಿಂದ ಕಲ್ಲಂಗಡಿ ಬೆಳೆ ರಕ್ಷಿಸಿಕೊಳ್ಳಲು ರೈತರು ಕಂಡುಕೊಂಡ ಸುಲಭ ಮಾರ್ಗವಿದು. ಮಾತ್ರವಲ್ಲದೆ ಬೆಳೆಗೆ ದೃಷ್ಟಿ ತಾಗಬಾರದೆಂದೂ, ಕೆಟ್ಟ ದೃಷ್ಟಿ ಮೊದಲು ಬೆದರು ಬೊಂಬೆಗಳ ಮೇಲೆಯೇ ಬೀಳಲಿ ಎಂಬ ಉದ್ದೇಶದಿಂದ ಇಂಥ ಬೊಂಬೆಗಳನ್ನು ಬೆಳೆ ಕಾವಲಿಗೆ ನಿಲ್ಲಿಸುವ ಸಂಪ್ರದಾಯ ಹೊಲ, ತೋಟ, ಗದ್ದೆಗಳಲ್ಲಿ ಕಂಡು ಬರುತ್ತದೆ. ಈ ಸಾಮಾನ್ಯ ಉದ್ದೇಶಕ್ಕೆ ಮಾಡುವ ಬೆದರುಗೊಂಬೆಗಳನ್ನೂ ಒಂದು ಕಾನ್ಸಪ್ಟ್ ಇಟ್ಟುಕೊಂಡು ಮಾಡಿರುವುದು ಇಲ್ಲಿನ ವಿಶೇಷ.

—ಸೋಮಲಿಂಗ ಬೇಡರ, ಬೀಳಗಿ



## 120 ವರ್ಷಗಳ ಕೊಣಬಿಗೆ

ದಶಕಗಳ ಹಿಂದೆ ರೊಟ್ಟಿ ಹಿಟ್ಟನ್ನು ಚೆನ್ನಾಗಿ ನಾದಲು, ತಟ್ಟಲು, ಬಡಿಯಲು ಮರದ ಕೊಣಬಿಗೆ ಉಪಯೋಗಿಸುತ್ತಿದ್ದರು. ಅಷ್ಟೇ ಅಲ್ಲದೆ, ಹಬ್ಬ ಹಾಗೂ ವಿಶೇಷ ದಿನಗಳಲ್ಲಿ ಚಿತ್ರಾನ್ನ ಕಲೆಸಲೂ ಇದರ ಬಳಕೆಯಾಗುತ್ತಿತ್ತು. ಆ ಕೊಣಬಿಗೆಯಲ್ಲಿ ಆರಿಸಿ ಚಿತ್ರಾನ್ನ ಕಲೆಸಿದರೆ ಬೇಗ ಹಳಸುವುದಿಲ್ಲ ಎಂಬ ನಂಬಿಕೆ ಇದೆ. ಈ ಚಿತ್ರದಲ್ಲಿರುವ ಕೊಣಬಿಗೆ ಸುಮಾರು 120 ವರ್ಷಗಳಷ್ಟು ಹಳೆಯದು. 22 ಅಂಗುಲ ಉದ್ದ, 18 ಅಂಗುಲ ಅಗಲ, 4.5 ಅಂಗುಲ ಎತ್ತರ, 3 ಅಂಗುಲದ ಎರಡೂ ಕೊನೆಗಳಲ್ಲಿ ಹಿಡಿದುಕೊಳ್ಳಲು ಎರಡು ಕಿವಿಗಳು, ಸುಮಾರು 8 ಕೆ.ಜಿ. ತೂಕ ಇರುವ ಈ ಕೊಣಬಿಗೆ ಈಗಲೂ ಸುಸ್ಥಿತಿಯಲ್ಲಿದೆ.

—ಶಿವಮೊಗ್ಗ ರಮೇಶ್, ಮೈಸೂರು

